ಶ್ರೀ ವಾಟಾಳ್ ನಾಗರಾಜ್: ಊಟ ಆದಮೇಲೆ ಬಂದು ಅವರು ಮಾತನಾಡಲಿ. ಆಗಬಹುದು.

ಛೇರ್ಮನ್: ಈಗ ಸದನವನ್ನು ಮಧ್ಯಾಹ್ನ ಎರಡೂವರೆ ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1 ಗಂಟೆ 35 ನಿಮಿಷಕ್ಕೆ ಮುಂದೂಡಿ ಮತ್ತೆ 2 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿರ್ಣಯಿಸಿತು)

(ಸಭೆಯು ಪುನಃ : 2–50ಕ್ಕೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರಾದ ಶ್ರೀ ಕೃಷ್ಣ ಅವರು ಅಧ್ಯಕ್ಷ ಸ್ಥಾನದಲ್ಲಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ,

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಯಡಿಯೂರಪ್ಪನವರೇ ಒಂದು ನಿಮಿಷ ಇರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಮೊದಲನೇ ಸಾಲಿನ ಬೆಂಚ್‌ನಲ್ಲಿ ಯಾರೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್:– ನಾಲ್ಕೇ ಜನ ಇದ್ದಾರೆ. ಇದೇನು ಸರ್ಕಾರವೇ?

ಶ್ರೀ ಮಿರಾಜುದ್ದೀನ್. ಎಸ್. ಪಾಟೀಲ್ (ಪಶುಸಂಗೋಪನಾ ಸಚಿವರು):– ನಾನು ಇದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ನಿಮಗೆ ಹಾರ್ಟ್ ಅಟ್ಯಾಕ್ ಆದರೆ ನಾನೇನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್:– ಪರಿಸ್ಥಿತಿ ಏನು ಇದು?

(ಗೊಂದಲ)

ಅಧ್ಯಕ್ಷರು:– ಕ್ಯಾಬಿನೆಟ್ ಸಚಿವರು ಇದ್ದಾರೆ.

(ಗೊಂದಲ)

ಶ್ರೀ ಮಿರಾಜುದ್ದೀನ್ ಎನ್ ಪಾಟೀಲ್:– ಮಾನ್ಯ ಮಾಧುಸ್ವಾಮಿಯವರೇ ನೀವು ಆ ತರಹ ಮಾತನಾಡಬಾರದು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಎರಡೂವರೆಗೆ ಪ್ರಾರಂಭ ಆಗಬೇಕಾಗಿತ್ತು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾವೇನು ಮಾಡಬೇಕು ಹೇಳಿ? ಇಲ್ಲಿ ಕೋರಂ ಇಲ್ಲ. ಕೋರಂ ನಾವು ತುಂಬಿಕೊಡುವಂತಹ ಪರಿಸ್ಥಿತಿ. ಒಬ್ಬರೂ ಮೊದಲನೇ ಸಾಲಿನ ಮಂತ್ರಿಗಳು ಇಲ್ಲ. ಅದನ್ನು ಹೇಳುವುದಕ್ಕೆ ನಿಮ್ಮ ಸರ್ಕಾರ ಬದುಕಿದೆಯೋ ಸತ್ತಿದೆಯೋ ಎಂದು ಕೇಳುತ್ತೀದ್ದೇನೆ. ನಿನ್ನೆ ರಾತ್ರಿ ನಡೆದಂತಹ ಘಟನೆಗಳು. ಅಲ್ಲೆಲ್ಲೋ ಪಂಚಾಯಿತಿಗೋಸ್ಕರ ಸದನ ಏಕೆ ನಡೆಸುತ್ತಿದ್ದೀರಿ? ರಾಜ್ಯದ ಜನತೆ ಕ್ಷಮಾಪಣೆ ಕೇಳಬೇಕು.

(ಗೊಂದಲ)

ಅಧ್ಯಕ್ಷರು:– ಮಿರಾಜುದ್ದೀನ್ ಪಟೇಲ್ ಅವರು ಇದ್ದಾರೆ. ಅವರ ಬಗ್ಗೆ ಏಕೆ ಮಾತನಾಡುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಆ ಮಾತಿಗಲ್ಲ. ನಿಮಗೇನು ಅನಿಸುತ್ತದೆ ಹೇಳಿ? ನೀವು ಮೂರು ಜನ ಇದ್ದೀರಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ತಾವು ಆಡಳಿತ ಪಕ್ಷದವರಿಗೆ ಹೇಳಬೇಕು.

ಅಧ್ಯಕ್ಷರು:– ಹೇಳೋಣ. ಈಗ ಮಾನ್ಯ ಯಡಿಯೂರಪ್ಪನವರು ಭಾಷಣ ಆರಂಭ ಮಾಡಲಿ. ನಾನು ಕರೆಸುತ್ತೇನೆ.

ಶ್ರೀ ಮಿರಾಜುದ್ದೀನ್ ಎಸ್ ಪಾಟೀಲ್:– ನಾನು ಯಾವ ಬೇರೆ ಮಾತು ರೆಕಾರ್ಡ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಒಂದು ಮಾತು ಏನು ಹೇಳಿದರು?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಮ್ಮ ನಿಮ್ಮನೆ ಪ್ರಶ್ನೆ ಅಲ್ಲ. ಆಡಳಿತ ಪಕ್ಷದವರನ್ನು ಕರೆಸಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈ ಸರ್ಕಾರ ಬೆತ್ತಲೆ ಆಗುತ್ತದೆ.

(ಗೊಂದಲ)

ಅಧ್ಯಕ್ಷರು:– ನಾನು ವಿಪ್ ಕಳಿಸಿದ್ದೇನೆ. ಬರುತ್ತಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಸರ್ಕಾರದ ಮರ್ಯಾದೆಯ ಪ್ರಶ್ನೆ. ಜನರ ಗತಿ ಏನು?

ಅಧ್ಯಕ್ಷರು:– ಆಯಿತು. ಆರಂಭ ಮಾಡಿ. ಇಬ್ಬರು ಮಂತ್ರಿಗಳು ಇದ್ದಾರಲ್ಲ ತಾವು ಆರಂಭ ಮಾಡಿ.

ಶ್ರೀ ಮಿರಾಜುದ್ದೀನ್ ಎಸ್ ಪಾಟೀಲ್:– ನೀವು ಮಾತನಾಡುತ್ತಿದ್ದೀರಿ. ನಿಮಗೆ ಹಕ್ಕು ಇದೆ. ನಿಮ್ಮ ಲೈಟ್ ಇದೆ ರೂಲಿಂಗ್‌ನವರು ಇರಬೇಕು ಎಂದು ಹೇಳುವುದಕ್ಕೆ ಅಪೋಸಿಷನ್‌ನವರಿಗೆ, ನಿಮ್ಮ ಧರ್ಮ. ಅದನ್ನು ಕೇಳಿ. ಆದರೆ ನೀವೇನು ಹೇಳಿದಿರಿ? ಮಾನ್ಯ ಮಾಧುಸ್ವಾಮಿ ಅವರೇ? ನಿಮಗೆ ಹಾರ್ಟ್ ಅಟ್ಯಾಕ್ ಆದರೆ ಏನು ಮಾಡಬೇಕು ಎಂದಿರಿ? ನನಗೆ ಹಾರ್ಟ ಅಟ್ಯಾಕ್ ಆದರೆ ಏನು ಮಾಡಬೇಕು ಎಂದರೆ ಸದನ ಇರಬಾರದು. ಅಡ್ಜರ್ನ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್:– ಬೇಡ ಬೇಡ.

ಶ್ರೀ ಜೆ.ಸಿ. ಮಾಧುಸ್ವಾಮಿ:– ನೀವು ಪೇಷಂಟ್ ನಾವೇನು ಮಾಡಬೇಕು?

ಶ್ರೀ ಮಿರಾಜುದ್ದೀನ್ ಎಸ್. ಪಟೇಲ್:– ಯಾರೂ ಪೇಷಂಟ್ ಇಲ್ಲ ಹೇಳಿ. ನಿಮಗೆ ಏನು ಇದೆ?

ಶ್ರೀ ಜೆ.ಸಿ. ಮಾಧುಸ್ವಾಮಿ:– ನಾನು ಪೇಷಂಟ್ ಅಲ್ಲ.

(ಗೊಂದಲ)

ಶ್ರೀ ಮಿರಾಜುದ್ದೀನ್ ಎಸ್. ಪಟೇಲ್:– ನೀವು ಆ ರೀತಿ ಮಾತನಾಡಬಾರದು.

ಶ್ರೀ ವಾಟಾಳ್ ನಾಗರಾಜ್:– ಸರಿ ಇಲ್ಲ ಅದು ಬೇಡ.

ಅಧ್ಯಕ್ಷರು:– ಆಯಿತು ಬಿಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಂತ್ರಿಗಳೇ ಇರುವುದಿಲ್ಲ ಎಂದರೆ ಅಧಿಕಾರಿಗಳಿಗೆ ಯಾರು ಏನು ಹೇಳುತ್ತಾರೆ ಸಾರ್? ಮಂತ್ರಿಗಳೂ ಇಲ್ಲ. ಅಧಿಕಾರಿಗಳೂ ಇಲ್ಲ.

ಶ್ರೀ ಮಿರಾಜುದ್ದೀನ್ ಎಸ್ ಪಟೇಲ್:– ಮಾನ್ಯ ವಿರೋಧ ಪಕ್ಷದ ನಾಯಕರು ಇರಲಿ. ಮಾನ್ಯ ವಾಟಾಳ್ ನಾಗರಾಜ್ ಅವರು ಇರಲಿ. ಮಾನ್ಯ ಜಿ.ವಿ.ಶ್ರೀರಾಮರೆಡ್ಡಿ ಸಾಹೇಬರು ಇರಲಿ. ಅವರೆಲ್ಲರಿಗೂ ನಾನು ರೆಸ್ಪೆಕ್ಟ್ ಕೊಡುತ್ತೇನೆ. ಮಾನ್ಯ ಮಾಧುಸ್ವಾಮಿಯವರಿಗೂ ನಾನು ರೆಸ್ಪೆಕ್ಟ್ ಕೊಡುತ್ತೇನೆ. ನಿಮ್ಮ ಬಗ್ಗೆ ನಮಗೆ ಗೌರವ ಇದೆ. ನೀವು ಸೀನಿಯರ್ ಸದಸ್ಯರು ಇದ್ದೀರಿ. ಯಾವಾಗಲೂ ನೀವು ಸದನದಲ್ಲಿ ಬಹಳ ನೋಟೆಡ್ ಆಗಿ ಮಾತನಾಡುತ್ತೀರಿ. ನಾನು ಅದರ ಬಗ್ಗೆ ಅಪ್ರಿಷಿಯೇಟ್ ಮಾಡುತ್ತೇವೆ. ಆದರೆ ಈ ತರಹ ಮಾತನಾಡುವುದು ಸರಿಯೇ?

ಶ್ರೀ ಜೆ.ಸಿ. ಮಾಧುಸ್ವಾಮಿ:– ನೀವು ಪೇಷೆಂಟ್ ಇದ್ದೀರಿ ಏನು ಮಾಡೋಣ ಎಂದು ಹೇಳಬಾರದಾ?

ಶ್ರೀ ಮಿರಾಜುದ್ದೀನ್ ಎಸ್ ಪಾಟೀಲ್;– ನೀವು ಹೇಳಬಾರದು. ಪೇಷೆಂಟ್ ಇದ್ದರೂ ನೀವು ಹೇಳಬಾರದು.

ಅಧ್ಯಕ್ಷರು:– ಮಾನ್ಯ ಮಾಧುಸ್ವಾಮಿಯವರೇ. ಅವರ ಮನಸ್ಸಿಗೆ ನೋವಾಗಿದೆ. ಅವರು ಹೇಳಿದ್ದಾರೆ. ದಯಮಾಡಿ ಕುಳಿತುಕೊಳ್ಳಿ. ಇಲ್ಲಿಗೆ ಮುಗಿಸಿ. ಏಕೆ ಇದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮುಗಿಸುವುದು ಏನು ಸಾರ್? ಅವರು ಡಿನ್ಯೆ ಮಾಡುವುದಕ್ಕೆ ನಿಂತಿದ್ದಾರೆ.

ಅಧ್ಯಕ್ಷರು:– ಆಯಿತು. ಈಗ ನಾನು ಚೀಫ್ ವಿಪ್ ಅವರನ್ನು ಕಳಿಸಿದ್ದೆ. ಈಗ ಬರುತ್ತಾರೆ. ಯಾವುದೋ ಮೀಟಿಂಗ್ ಇದ್ದರಂತೆ ಬರುತ್ತಾರೆ. ಅರ್ಥ ಮಂತ್ರಿಗಳು ಬರತ್ತಾರೆ. ದಯಮಾಡಿ ಆರಂಭ ಮಾಡಿ. ಹೇಳಿ ಬಂದಿದ್ದಾರೆ ದಯಮಾಡಿ ಆರಂಭ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವಾಗ ಮೊದಲನೇ ಸಾಲಿನಲ್ಲಿ ಒಬ್ಬರಾದರೂ ಇರಬೇಕಲ್ಲ.

ಅಧ್ಯಕ್ಷರು:– ಅವರು ನೋಟ್ ಮಾಡಿಕೊಳ್ಳುತ್ತಾರೆ. ಮಾತನಾಡಿ.

ಶ್ರೀ ಎಸ್.ಎಸ್. ಪಾಟೀಲ್:– ಸನ್ಮಾನ್ಯ ಅಧ್ಯಕ್ಷರೆ. ದಯವಿಟ್ಟು ನಾನು ತಮಗೇ ಕೇಳಿಕೊಳ್ಳುತ್ತೇನೆ. ಏನಾದರೂ ಒಂದು ಬಿಸಿ ಮಾಡಿ. ದಯಮಾಡಿ. ನನಗೇ ನಾಚಿಕೆ ಆಗುತ್ತದೆ. ತಲೆತಗ್ಗಿಸತಕ್ಕ ಪರಿಸ್ಥಿತಿ. ನಾವೇನು ಇಲ್ಲವೆಂದು ಹೇಳುವುದಿಲ್ಲ. ಇದೇನು ನೋಡಿ ಪರಿಸ್ಥಿತಿ ಇದೆ? ತಾವು ಟ್ರೈನಿಂಗ್ ಕೊಟ್ಟಿರಿ. ಎಲ್ಲಾ ಮಾಡಿದಿರಿ. ತರಬೇತಿ ಕೊಟ್ಟಿರಿ. ಎಲ್ಲರಿಗೂ ಅಸಹ್ಯ. ಮಂತ್ರಿಗಳದಂತೂ

ಒಂದು ಇಶ್ಯೂ. ಶಾಸಕರು ಇಲ್ಲ ಎಂದರೆ ಏನು ಮಾಡುವುದು? ಅವರು ಯಾರ ಎದುರುಗಡೆ ಮಾತನಾಡಬೇಕು.

ಅಧ್ಯಕ್ಷರು:– ಈಗ ನೀವು ಆಡಳಿತ ಪಕ್ಷದವರು. ನೀವು ಚೀಫ್ ವಿಪ್ ಅವರು ಇದ್ದೀರಿ. ಏನಾದರೂ ಮಧ್ಯಾಹ್ನ ಗಂಟೆ ಹೊಡೆದು ಐದು ನಿಮಿಷದೊಳಗೆ ನಿಮ್ಮವರು ಕನಿಷ್ಟ ಪಕ್ಷ 35 ಜನ ಸದಸ್ಯರು ಇರಬೇಕು. ಅಸಿಷನ್ ಒಬ್ಬರು ಇಬ್ಬರು ಇದ್ದರೂನು, ಸದನ ನಡೆಸಬೇಕಾದದ್ದು ನಿಮ್ಮದು ಕರ್ತವ್ಯ. ಸರ್ಕಾರದ ಕರ್ತವ್ಯ. ಈ ರೀತಿ ಆದರೆ ಸರಿಯಾಗುವುದಿಲ್ಲ. ನೀವು ಸ್ಪಿಕ್ಕಾಗಿ ನಿಮ್ಮ ಎಂಎಲ್ಎ ಗಳಿಗೆಲ್ಲಾ ಸೂಚನೆ ಕೊಟ್ಟು ನಾಳೆಯಿಂದ ಕಡ್ಡಾಯವಾಗಿ ಬೆಲ್ ಆದ ಐದು ನಿಮಿಷದೊಳಗೆ ಇರಬೇಕು. ಇಲ್ಲದಿದ್ದರೆ ನಾನು ಸೀರಿಯಸ್ ಆಗಿ ವ್ಯೂ ಮಾಡುತ್ತೇನೆ.

ಶ್ರೀ ಜಯಪ್ರಕಾಶ್ ಕೆ.ಹೆಗ್ಡೆ :– ಸದನ ಪ್ರಾರಂಭ ಆಗಿ ಇನ್ನೂ ಮೂರು ದಿವಸ ಆಗಿಲ್ಲ. ಆಸಕ್ತಿನೇ ಇಲ್ಲ ಎಂದರೆ.

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೇ ದಯಮಾಡಿ ಆರಂಭ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಹೇಗೆ ಸಾರ್ ಮಾತನಾಡುವುದು? ಯಾರಾದರೂ ಒಬ್ಬರಾದರೂ ಇರಬೇಕಲ್ಲ? ಮಾತನಾಡಿ ಮಾತನಾಡಿ ಎಂದರೆ ಹೇಗೆ ಮಾತನಾಡುವುದು?

ಅಧ್ಯಕ್ಷರು:– ದಯಮಾಡಿ ಅರ್ಥ ಮಾಡಿಕೊಳ್ಳಿ. ಈಗ ಏನಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಸಾರ್ ಮೊದಲನೆಯ ಸಾಲಿನಲ್ಲಿ ಒಬ್ಬರಾದರೂ ಇರಬೇಡವಾ?

ಅಧ್ಯಕ್ಷರು:– ಹೇಳಿ ಆಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೌರವದ ಪ್ರಶ್ನೆ ಅಲ್ಲವಾ? ಸದನದ ಗೌರವ ನಮ್ಮ ನಿಮ್ಮ ಪ್ರಶ್ನೆ ಅಲ್ಲ. ಒಬ್ಬರು ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದರೆ ಮೊದಲನೇ ಸಾಲಿನ ಮಂತ್ರಿಗಳು ಒಬ್ಬರೂ ಇಲ್ಲ ಎಂದರೆ ಇದು ಇಡೀ ವಿರೋಧ ಪಕ್ಷಕ್ಕೆ ಮಾಡಿದಂತಹ ಅವಮಾನ.

ಅಧ್ಯಕ್ಷರು:– ಅವರು ಆರಂಭ ಮಾಡಲಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ. ಈ ಸಭೆಯನ್ನು ಮುಂದಕ್ಕೆ ಹಾಕಿ. ಈ ಸಭೆ ಬೇಡ. ಮುಂದಕ್ಕೆ ಹಾಕಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ದಯವಿಟ್ಟು ಸಭೆಯನ್ನು ಮುಂದಕ್ಕೆ ಹಾಕಿ. ಬಿಡಿ ಅವರಿಗೆ ಬುದ್ಧಿ ಬರಲಿ. ಸಾರ್ ಮುಂದಕ್ಕೆ ಹಾಕಿ. ಅವರಿಗೆ ಬುದ್ಧಿ, ಬರಲಿ.

ಅಧ್ಯಕ್ಷರು:– ಇರಲಿ. ಇಷ್ಟೊಂದು ದುಡುಕಬೇಡಿ.

ಶ್ರೀ ಜಿ.ಸಿ. ಮಾಧುಸ್ವಾಮಿ:– ಸಭೆಯನ್ನು ಮುಂದಕ್ಕೆ ಹಾಕಿ ಸಾರ್.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:– ಇದು ಒಂದು ಬೆತ್ತಲೆ ಪ್ರದರ್ಶನ. ಒಂದು ಆಡಳಿತ ಪಕ್ಷದ ನಡವಳಿಕೆ ಇದಲ್ಲ. ಹಣಕಾಸಿನ ಸಚಿವರು.

ಅಧ್ಯಕ್ಷರು:– ನಾನು ಆಗಲೇ ಹೇಳಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:– ವಿಧಾನಸೌಧದಲ್ಲಿ ಕಚ್ಚಾಡಿ ಸಾಯುತ್ತಿದ್ದಾರೆ ಸಾರ್. ರಾಜ್ಯದ ಜನತೆ ಗತಿ ಏನಾಗಬಹುದು?

ಅಧ್ಯಕ್ಷರು:– ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ:– ನಾನು ಕಳೆದ 20 ವರ್ಷದ ನನ್ನ ಜೀವನದಲ್ಲಿ ಈ ರೀತಿ ಆಡಳಿತ ಪಕ್ಷದ 4–5 ಜನ ಇಲ್ಲಿ 35–40 ಜನ ಕುಳಿತಿದ್ದಂತಹ ದಿವಸಗಳನ್ನು ನಾನು ನೋಡಲಿಲ್ಲ.

(ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಸ್ಥಾನ ಬಿಟ್ಟು ಬಂದರು)

ಅಧ್ಯಕ್ಷರು;– ಈ ಸಣ್ಣ ವಿಷಯಕ್ಕೆ ತಾವು ವಾಕೌಟ್ ಮಾಡುವುದು ಚೆನ್ನಾಗಿರುವುದಿಲ್ಲ. ದಯಮಾಡಿ ಆರಂಭ ಮಾಡಿ. ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:– ಸಾರ್ ಇದು ಒಳ್ಳೆಯ ಸಂಪ್ರದಾಯ ಅಲ್ಲ. ಈ ಶಾಸನಸಭೆಗೆ ಅಗೌರವ ಮತ್ತು ಶಾಸನ ಸಭೆಯ ಅಧ್ಯಕ್ಷರ ಅಗೌರವ. ಇದು ಒಳ್ಳೆಯ ಸೂಚನೇನ? ದಯವಿಟ್ಟು ಸರ್ಕಾರಕ್ಕೆ ಈ ಮೂಲಕ, ಪ್ರಜಾತಂತ್ರ ವ್ಯವಸ್ಥೆ ಉಳಿಯಬೇಕು ಎನ್ನುವುದಾದರೆ ಶಾಸನಸಭೆಗೆ ಗೌರವ ಕೊಡಬೇಕು ಎನ್ನುವುದಾದರೆ, ಮತ್ತು ಆಯವ್ಯಯ ಚರ್ಚೆ ಆಗುವಾಗ, ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ಮಾತನಾಡುವಾಗ, ಈ ಕಡೆ ಅಧಿಕಾರಿಗಳು ಇಲ್ಲ. ಒಂದು ಕಡೆ ಆಡಳಿತ

ಪಕ್ಷದ ಶಾಸಕರು ಇಲ್ಲ. ಏನಿದು ಹುಡುಗಾಟ? ದಿವಾಳಿ ಎದ್ದು ಹೋಗಿದೆಯೇ? ಸರ್ಕಾರ ಇಲ್ಲಿ ಇದೆಯೇ? ಎಲ್ಲಿದೆ ಸರ್ಕಾರ? ನನಗೆ ಅರ್ಥ ಆಗುತ್ತಿಲ್ಲ. ದಯಮಾಡಿ ತಮಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಸಭೆಯನ್ನು ಮುಂದಕ್ಕೆ ಹಾಕಿ. ದಯಮಾಡಿ ಸಭೆಯನ್ನು ಮುಂದಕ್ಕೆ ಹಾಕಿ.

ಅಧ್ಯಕ್ಷರು:– ಈಗ ಮಾನ್ಯ ಅರ್ಥ ಸಚಿವರು ಬಂದರು.

ಶ್ರೀ ವಾಟಾಳ್ ನಾಗರಾಜ್:– ಇದು ಸರಿಯಾದುದು ಅಲ್ಲ.

ಅಧ್ಯಕ್ಷರು:– ಮಾನ್ಯ ಅರ್ಥ ಸಚಿವರು ಇಲ್ಲ ಎಂದು ಅವರು ಉಗ್ರರಾಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಖಂಡಿತವಾಗಿ ಇದು ಸರಿಯಾದ ನೀತಿ ಅಲ್ಲ. ಇದು ಒಳ್ಳೆಯ ಸಂಪ್ರದಾಯ ಅಲ್ಲ. ಅಧ್ಯಕ್ಷರೇ. ದಯಮಾಡಿ ತಾವು ಸಭೆಯನ್ನು ಮುಂದಕ್ಕೆ ಹಾಕಿ, ನಾನು ಹೇಳುತ್ತೇನೆ. ನೋಡಿ. ಎಷ್ಟು ಜನ ಇದ್ದಾರೆ? ಏಳೇ ಜನ ಇದ್ದಾರೆ. ತಾವು ಆ ಕಡೆ ಲೆಕ್ಕ ಹಾಕಿ, 10 ಜನ ಇದ್ದಾರೆ.

ಅಧ್ಯಕ್ಷರು:– ಈಗ ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 3–00 ಗಂಟೆಗೆ 10 ನಿಮಿಷಗಳ ಅವಧಿಗೆ ಮುಂದೂಡಲಾಯಿತು)

(ಸದನವು ಪುನಃ ಮಧ್ಯಾಹ್ನ 3.24 ಗಂಟೆಗೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರಾದ ಶ್ರೀ ಕೃಷ್ಣರವರು ಪೀಠದಲ್ಲಿ ಉಪಸ್ಥಿತರಾದರು)

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೇ, ತಮ್ಮ ಮಾತನ್ನು ತಾವು ಮುಂದುವರೆಸುತ್ತೀರಾ?

ಶ್ರೀ ಬಿ.ಎಸ್.ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ಹೇಗೂ ಬ್ರೇಕ್ ಆಗಬೇಕಾಗಿತ್ತು. ಈಗ ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡಿ. ನಂತರ question hour ತೆಗೆದುಕೊಳ್ಳಿ. ನಾನು ನಾಳೆ ಮಾತನಾಡುತ್ತೇನೆ.

ಶ್ರೀ ಸಿದ್ದರಾಮಯ್ಯ ;– ಮಾನ್ಯ ಯಡಿಯೂರಪ್ಪನವರೇ. ತಾವು ದಯಮಾಡಿ ಮಾತನಾಡುವುದನ್ನು ಮುಂದುವರೆಸಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ :– ಮಾನ್ಯ ಯಡಿಯೂರಪ್ಪನವರೇ, ತಾವು ಮಾತನಾಡುವುದನ್ನು ಮುಂದುವರೆಸಿ ಎಂದು ನಾನು ನಿಮ್ಮನ್ನು request ಮಾಡಿಕೊಳ್ಳುತ್ತೇವೆ. ಮಧ್ಯೆ ಬ್ರೇಕ್ ಮಾಡುವುದು ಬೇಡ.